ಇ) ಸದರಿ ಕಾಲೇಜಿಗೆ ಹಾಲಿ 8 ಕೊಠಡಿಗಳಿದ್ದು, ಆ ಕೊಠಡಿಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಕೊಠಡಿಗಳ ಕೋರತೆ ನೀಗಿಸಲು ಅನುದಾನದ ಲಭ್ಯತೆಯನ್ನು ಆಧರಿಸಿ ಕಟ್ಟಡ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು.

ಈ) ಅನುದಾನವನ್ನು ಒದಗಿಸಿದ ನಂತರ ಕಟ್ಟಡ ನಿರ್ಮಾಣ ಮಾಡಲು ಪ್ರಾರಂಭಿಸಲಾಗುವುದು.

ನೈರ್ಮಲ್ಯ ಯೋಜನೆ ಅನುಷ್ಠಾನ

38(114) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಫಲಾನುಭವಿಗಳ ಹಣದಿಂದ ಕಾರ್ಯಗತವಾಗುವ ಸೆಂಟ್ರಲ್ ಟೋಟಲ್ ಸ್ಯಾನಿಟೇಶನ್ ಕ್ಯಾಂಪೇನ್ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ?

ಆ) ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ, ರಾಜ್ಯ ಮತ್ತು ಫಲಾನುಭವಿಗಳು ಶೇಕಡ ಎಷ್ಟರ ಅನುಪಾತದಲ್ಲಿ ಹಣವನ್ನು ಭರಿಸಬೇಕಾಗಿದೆ?

ಇ) ಈ ಕಾರ್ಯಕ್ರಮದನ್ವಯ ಬೀದರ್ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಸಂಪೂರ್ಣ ನೈರ್ಮಲ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ?

ಈ) ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆ ಯಶಸ್ವಿಯಾಗಿದೆ; ಇದಕ್ಕೆ ವೆಚ್ಚ ಮಾಡಲಾದ ಹಣವೆಷ್ಟು?

ಉ) ಇದರಲ್ಲಿ ಕೇಂದ್ರ ರಾಜ್ಯ ಸರ್ಕಾರ ಮತ್ತು ಫಲಾನುಭವಿಗಳ ಪಾಲೆಷ್ಟು (ಗ್ರಾಮವಾರು ವಿವರಗಳನ್ನು ಒದಗಿಸುವುದು)?

ಊ) ಈ ಯೋಜನೆ ಬೀದರ್ ಜಿಲ್ಲೆಯಲ್ಲಿ ಪೂರ್ಣವಾಗಿ ಅನುಷ್ಠಾನಗೊಳ್ಳದೆ/ಯಶಸ್ವಿಯಗದೇ ಇದ್ದಲ್ಲಿ ಇದಕ್ಕೆ ಕಾರಣಗಳೇನು?

ಋ) ಇದಕ್ಕೆ ಕಾರಣಕರ್ತರಾದವರ ವಿರುದ್ಧ ಕೈಗೊಳ್ಳುವ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ, ಗೃಹ ಶೌಚಾಲಯಗಳು, ಸಮುದಾಯ ಶೌಚಾಲಯಗಳು, ಶಾಲಾ ಶೌಚಾಲಯಗಳನ್ನು, ಅಂಗನವಾಡಿ ಶೌಚಲಯಗಳ ನಿರ್ಮಾಣ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

ಆ)

	ಕೇಂದ್ರ	ರಾಜ್ಯ	ಫಲಾನುಭವಿಗಳ ೨
ಗೃಹ ಶೌಚಾಲಯ	45.5%	45.5%	9%
ಸಮುದಾಯ ಶೌಚಾಲಯ	60%	30%	10%
ಶಾಲಾ ಶೌಚಾಲಯ	80%	20%	–
ಅಂಗನವಾಡಿ ಶೌಚಾಲಯ	80%	20%	–

ಇ) ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮವು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಷ್ಠಾನದಲ್ಲಿರುತ್ತದೆ

ಈ) ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಷ್ಠಾನದಲ್ಲಿರುತ್ತದೆ. ಇದುವರೆಗೆ ಜಿಲ್ಲೆಯಲ್ಲಿ 22792 ಬಿಪಿಎಲ್ ಕುಟುಂಬಗಳಿಗೆ ಶೌಚಾಲಯ, 52798 ಎಪಿಎಲ್ ಕುಟುಂಬಗಳಿಗೆ ಶೌಚಾಲಯ, 12 ಸಮುದಾಯ ಶೌಚಾಲಯಗಳು, 1024 ಶಾಲಾ ಶೌಚಾಲಯಗಳು ಹಾಗೂ 840 ಅಂಗನವಾಡಿ ಶೌಚಾಲಯಗಳು ನಿರ್ಮಾಣಗೊಂಡಿರುತ್ತವೆ. ಇದಕ್ಕಾಗಿ ಒಟ್ಟು 542.52 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕೋನಮೇಳಕುಂದ ಗ್ರಾಮ ಪಂಚಾಯತಿಯು ಮಾತ್ರ 2008–09ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಪಡೆದಿರುತ್ತದೆ. ಈ ಗ್ರಾಮ ಪಂಚಾಯತಿಯಲ್ಲಿ ಬಿಪಿಎಲ್ ಕುಟುಂಬಗಳ ಶೌಚಾಲಯ ನಿರ್ಮಾಣಕ್ಕೆ ರೂ.3.00 ಲಕ್ಷಗಳು, ಸಮುದಾಯ ಶೌಚಾಲಯಕ್ಕಾಗಿ ರೂ.2.00 ಲಕ್ಷಗಳು

ಹಾಗೂ ಐ.ಇ.ಸಿ ಪ್ರಚಾರಾಂದೋಲನಕ್ಕಾಗಿ ರೂ.1.00 ಲಕ್ಷ ಹೀಗೆ ಒಟ್ಟು ರೂ.6.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. 9–10ನೇ ಸಾಲಿನಲ್ಲಿ 25 ಗ್ರಾಮ ಪಂಚಾಯಿತಿಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಅರ್ಜಿಸಲ್ಲಿಸಿದೆ. ಇದಕ್ಕಾಗಿ ಸದರೀ ಸಾಲಿನಲ್ಲಿ ರೂ.1.22 ಕೋಟಿಗಳನ್ನು ಗ್ರಾಮ ಪಂಚಾಯತಿಗೆ ಬಿಡುಗಡೆ ಮಾಡಲಾಗಿದೆ.

ಊ) ವೆಚ್ಚ ಮಾಡಲಾದ ಒಟ್ಟು ರೂ.542.52 ಲಕ್ಷಗಳಲ್ಲಿ ಕೇಂದ್ರದ ಪಾಲು ರೂ.340.84 ಲಕ್ಷಗಳು, ರಾಜ್ಯದ ಪಾಲು ರೂ.197.96 ಲಕ್ಷಗಳು ಹಾಗೂ ಫಲಾನುಭವಿಗಳ ಪಾಲು ರೂ.3.72 ಲಕ್ಷಗಳಾಗಿರುತ್ತದೆ.

ಋ) ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮವು 2ನೇ ಅಕ್ಟೋಬರ್ 2005 ರಿಂದ ಪ್ರಾರಂಭವಾಗಿ 2012 ರವರೆಗೆ ಅನುಷ್ಠಾನದಲ್ಲಿದ್ದು ಈ ಕಾರ್ಯಕ್ರಮವು ಜಿಲ್ಲೆಯಲ್ಲಿ ಪ್ರಗತಿಯಲ್ಲಿರುತ್ತದೆ ವೈಯಕ್ತಿಕ ಶೌಚಾಲಯಗಳನ್ನು ಫಲಾನುಭವಿಗಳೇ ನಿರ್ಮಿಸಿಕೊಳ್ಳಬೇಕಾಗಿದ್ದು ಪ್ರಗತಿ ನಿಧಾನವಾಗಿರುತ್ತದೆ. ತ್ವರಿತ ಅನುಷ್ಠಾನಕ್ಕಾಗಿ ಜನರ ಮನವೊಲಿಸಲಾಗುತ್ತಿದೆ. ನಿಗದಿತ ಅಂದರೆ 2012 ರೊಳಗೆ ಪೂರ್ಣಗೊಳಿಸುವ ಅವಶ್ಯಕ ಕ್ರಮ ವಹಿಸಲಾಗುತ್ತಿದೆ.

ಋ) –

ಖಾಲಿಯಿರುವ ಉಪನ್ಯಾಸಕರ ಹುದ್ದೆ ಭರ್ತಿ

39(249) ಶ್ರೀ ರೇವಣ್ಣ ಹೆಚ್ ಡಿ:(ಹೊಳೆನರಸೀಪುರ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳೆಷ್ಟು? (ಜಿಲ್ಲಾವಾರು ಹಾಗೂ ವಿಷಯವಾರು ಮಾಹಿತಿ ನೀಡುವುದು)

ಆ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು